## ವಿದ್ಯಾ ನಾರಾಯಣ ಭಟ್

ಕನ್ನಡದ ಎರಡು ಮತ್ತು ಮೂರನೇ ಹಂತದ ಕೊರೊನಾ ಜಾಗೃತಿ ಸಂದೇಶಕ್ಕೆ ಧ್ವನಿಯಾದವರು ವಿಟ್ಲ ಸಮೀಪದ ಮುಳಿಯಾದ ವಿದ್ಯಾ ನಾರಾಯಣ ಭಟ್. ಕಾಲೇಜು ದಿನಗಳಲ್ಲಿ ಡ್ರಾಮಾ, ನೃತ್ಯ, ಸಂಗೀತ, ಕ್ರೀಡೆ ಹೀಗೆ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದ ವಿದ್ಯಾ ಈ ಕ್ಷೇತ್ರಕ್ಕೆ ಬಂದದ್ದು ಆಕಸ್ಮಿಕ. ವ್ಯಾಸಂಗ ಮುಗಿಸಿದ ಬಳಿಕ ವಿಜ್ಞಾನಿ ಪುತ್ತೂರಿನ ನಾರಾಯಣ ಭಟ್ ಅವರೊಂದಿಗೆ ವೈವಾಹಿಕ ಜೀವನಕ್ಕೆ ಪ್ರವೇಶಿಸಿದ ಇವರು ಪತಿಯ ಉದ್ಯೋಗದ ನಿಮಿತ್ತ ಅನಿವಾರ್ಯವಾಗಿ ಶಿಲ್ಲಾಂಗ್, ಸೂರತ್, ಸಿಕ್ಕಿಂ ಮೊದಲಾದ ಕಡೆ ನೆಲೆಸಬೇಕಾಗಿ ಬಂತು.



2009ರಲ್ಲಿ ದೆಹಲಿಗೆ ಆಗಮಿಸಿದ ಅವರಿಗೆ ಪರಿಚಯವಾಗಿದ್ದು ದೆಹಲಿಯ ಕರ್ನಾಟಕ ಸಂಘ. ಜೆಸಿಕಾ ಅವರಂತೆಯೇ ವಿದ್ಯಾ ಅವರಿಗೂ ಕೃಷ್ಣ ಭಟ್‌ರ ಮಾರ್ಗದರ್ಶನ ದೊರೆಯಿತು.

ಸರ್ಕಾರಿ ಪ್ರಕಟಣೆಗಳು, ರೇಡಿಯೊ ಡ್ರಾಮಾಗಳಷ್ಟೇ ಅಲ್ಲದೇ, ಡಾಲರ್ ಬಿಗ್‌ಬಾಸ್, ಪ್ರಧಾನಮಂತ್ರಿ ಭಾರತೀಯ ಜನೌಷಧಿ ಪರಿಯೋಜನ್, ಭೇಟಿ ಬಚಾವೋ ಭೇಟಿ ಪಡಾವೋ ಹೀಗೆ ಸಾವಿರಾರು ಜಾಹೀರಾತುಗಳು ಮತ್ತು ಸರ್ಕಾರದ ಪ್ರಕಟಣೆಗಳಿಗೆ ವಿದ್ಯಾ ಭಟ್ ಕಂಠಸಿರಿ ಇದೆ. ಆನಿಮೇಷನ್ ಪಾತ್ರಗಳಿಗೂ ಧ್ವನಿಯಾಗಿದ್ದಾರೆ. 'ಸರ್ಕಾರಿ ಪ್ರಕಟಣೆಗಳು, ಜಾಹೀರಾತುಗಳನ್ನು ಸುಲಭವಾಗಿ ನಿರ್ವಹಿಸಬಹುದು. ಆದರೆ ಆನಿಮೇಷನ್‌ಗಳಲ್ಲಿ ಸಂಭಾಷಣೆಗಳನ್ನು ಪಾತ್ರಗಳ ತುಟಿಚಲನೆಗೆ ಹೊಂದಿಸಬೇಕಾಗುತ್ತದೆ. ಇದು ಸವಾಲಿನ ಕೆಲಸ. ಇನ್ನೂ ಒಮ್ಮೊಮ್ಮೆ ಬೆಳಿಗ್ಗೆಯಿಂದ ಸಂಜೆಯವರೆಗೂ ಸ್ಟುಡಿಯೋದಲ್ಲೇ ಇರಬೇಕಾಗುತ್ತದೆ. ಇದಕ್ಕೆಲ್ಲದಕ್ಕೂ ತಾಳ್ಮೆ ಅಗತ್ಯ' ಎನ್ನುವ ವಿದ್ಯಾ, ವೈರಸ್ ಕುರಿತು ಜಾಗೃತಿ ಮೂಡಿಸಿದ ಹೆಮ್ಮೆ ಇದೆ ಎನ್ನುತ್ತಾರೆ.

## ಯಾರಿವರು ಸರವು ಕೃಷ್ಣ ಭಟ್?

ಕಳೆದ ನಾಲ್ಕೂವರೆ ದಶಕಗಳಿಂದ ದೆಹಲಿಯಲ್ಲಿ ನೆಲೆಸಿರುವ ಕನ್ನಡಿಗ, ಖ್ಯಾತ ಕಂಠದಾನ ಕಲಾವಿದ ಸರವು ಕೃಷ್ಣ ಭಟ್ ಮೂಲತಃ ದಕ್ಷಿಣಕನ್ನಡ ಜಿಲ್ಲೆಯ ವಿಟ್ಲದವರು. 1975ರಲ್ಲಿ ದೆಹಲಿಗೆ ತೆರಳಿದ ಅವರು ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಹಲವು ವರ್ಷಗಳ ಕಾಲ ಖಾಸಗಿ ಕಂಪನಿಯ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ಸಾಂಸ್ಕೃತಿಕ ಆಸಕ್ತಿಯಿಂದಾಗಿ ವೃತ್ತಿಗೆ ರಾಜೀನಾಮೆ ನೀಡಿ ಆಕಾಶವಾಣಿಯಲ್ಲಿ ಕ್ಯಾಶ್ಯುಯಲ್ ನ್ಯೂಸ್ ರೀಡರ್ ಆಗಿ ಸೇರಿದರು. ಆ ಸಮಯದಲ್ಲಿ ಹಲವಾರು ನಿರ್ಮಾಪಕರ ಪರಿಚಯದಿಂದಾಗಿ ವಾಯ್ಸ್ ಓವರ್ ಜಗತ್ತನ್ನು ಪ್ರವೇಶಿಸಿದರು. ಕಳೆದ 35 ವರ್ಷಗಳಿಂದ ಕಂಠದಾನ ರಂಗದಲ್ಲಿ ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡು ಅಸಂಖ್ಯ ಕಾರ್ಯಕ್ರಮಗಳಿಗೆ ಧ್ವನಿದಾನ ನೀಡಿದ್ದಾರೆ. ದೆಹಲಿ ಕನ್ನಡ ಎಜ್ಯುಕೇಶನ್ ಸೊಸೈಟಿಯ ಅಧ್ಯಕ್ಷರೂ ಆಗಿರುವ ಕೃಷ್ಣ ಭಟ್ ಅವರು ತಮ್ಮ ತಂಡದ ಮೂಲಕ ಹಲವಾರು ಕನ್ನಡಿಗರನ್ನು ಕಂಠದಾನ ಕ್ಷೇತ್ರಕ್ಕೆ ಪರಿಚಯಿಸಿದ್ದಾರೆ.



'ವೃತ್ತಿಯ ದೃಷ್ಟಿಯಿಂದ ಅಥವಾ ಸಾಮರ್ಥ್ಯದ ದೃಷ್ಟಿಯಿಂದ ಕೊರೊನಾ ಜಾಗೃತಿ ಧ್ವನಿ ಎನ್ನುವುದು ಬಹಳ ದೊಡ್ಡ ವಿಷಯವಲ್ಲ. ಆದರೆ ಈ ಜಾಗೃತಿ ಧ್ವನಿ ಎನ್ನುವುದು ಬೇಕೋ ಅಥವಾ ಬೇಡವೋ ಅಂತೂ ಎಲ್ಲರೂ ಕೇಳುವಂತಾಗಿದೆ. ಆ ದೃಷ್ಟಿಯಿಂದ ಇದಕ್ಕೆ ಮಹತ್ವವಿದೆ. ಇಂದು ನನ್ನ ಶಿಷ್ಯರು ಈ ಜಾಗೃತಿ ಧ್ವನಿಯಿಂದ ಮುನ್ನೆಲೆಗೆ ಬಂದಿರುವುದು ಖುಷಿ ತಂದಿದೆ' ಎನ್ನುತ್ತಾರೆ ಸರವು ಕೃಷ್ಣ ಭಟ್.



## ಟಿಂಟುಮೋಲ್ ಜೋಸೆಫ್

ಮಲೆಯಾಳಂನ ಧ್ವನಿದಾನ ಕಲಾವಿದೆಯರಲ್ಲಿ ಮುಂಚೂಣಿಯಲ್ಲಿರುವ ಹೆಸರು ಟಿಂಟುಮೋಲ್ ಜೋಸೆಫ್. ಕೇರಳದ ಕೋಟೆಯಂ ಪಾಲಾದವರಾದ ಇವರು ಕಳೆದ 24 ವರ್ಷಗಳಿಂದ ಕರ್ನಾಟಕದ ಸುಳ್ಯದಲ್ಲಿ ನೆಲೆಸಿದ್ದಾರೆ.

ಯುಪಿಎಸ್‌ಸಿ ಪರೀಕ್ಷೆ ಬರೆಯುವ ಕನಸು ಹೊತ್ತು ದೆಹಲಿಗೆ ಬಂದ ಸಮಯದಲ್ಲಿ ಜೆಎನ್‌ಯು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಪುರುಷೋತ್ತಮ ಬಿಳಿಮಲೆ ಅವರು ಟಿಂಟುಮೋಲ್ ಜೋಸೆಫ್‌ರ ಧ್ವನಿ ಸಾಮರ್ಥ್ಯವನ್ನು ಗಮನಿಸಿ ಖ್ಯಾತ ಕಂಠದಾನ ಕಲಾವಿದ ಸರವು ಕೃಷ್ಣ ಭಟ್ ಅವರಿಗೆ ಈಕೆಯನ್ನು ಪರಿಚಯಿಸಿದರು. ಅಲ್ಲಿಂದ ಮುಂದೆ ಮಲೆಯಾಳಂ ಜೊತೆಗೆ ಕನ್ನಡ, ಹಿಂದಿ, ತಮಿಳು, ಇಂಗ್ಲಿಷ್ ಭಾಷೆಯ ಹಲವಾರು ಜಾಹೀರಾತು, ಸಾಕ್ಷ್ಯಚಿತ್ರ ಮತ್ತು ಮಲೆಯಾಳಂನ ವಿಶೇಷ ಕಾರ್ಯಕ್ರಮಗಳಿಗೆ ಕಂಠದಾನ ಮಾಡಿದ್ದಾರೆ.

'ನಾನು ವಾಯ್ಸ್ ಓವರ್ ಆರ್ಟಿಸ್ಟ್ ಆಗಬೇಕೆಂದು ಬಂದವಳಲ್ಲ. ಯುಪಿಎಸ್‌ಸಿ ಕನಸನ್ನು ಹೊತ್ತು ದೆಹಲಿಗೆ ಬಂದಿದ್ದೆ. ಅನಿರೀಕ್ಷಿತವಾಗಿ ವಾಯ್ಸ್ ಓವರ್ ಜಗತ್ತಿಗೆ ಪ್ರವೇಶಿಸಿದೆ. ಮಲೆಯಾಳಂ ಭಾಷೆಯಲ್ಲಿ ಕೊರೊನಾ ಕುರಿತು ಜಾಗೃತಿ ಮೂಡಿಸಲು ಅವಕಾಶವೂ ದೊರೆಯಿತು. ಜಾಗೃತಿ ಮೂಡಿಸಿದ ಖುಷಿ ಇದೆ' ಎನ್ನುತ್ತಾರೆ.